ಓಎಸ್ ನಂಬರ್: 117/2015 ಡಿ ಡಬ್ಲ್ಯು: 3

**<u>ದಿ:16.01.2023 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲು: ವಾದಿ ಪರ ವಕೀಲರಿಂದ:</u>**

1. ನಾನು ಈವರೆಗೂ ಸುಮಾರು 30-40 ವಿಲ್ ನಾಮೆಯನ್ನು ಮಾಡಿರುತ್ತೇನೆ. ನಾನು ಈ ದಾವೆಯನ್ನು 1ನೇ ಪ್ರತಿವಾದಿ ಪರ ನಡೆಸುತ್ತಿದ್ದುದರಿಂದ ಆಸ್ತಿಗೆ ಸಂಬಂಧಿಸಿದಂತೆ ನನಗೆ ಗೊತ್ತಿತ್ತು ಮತ್ತು 1ನೇ ಪ್ರತಿವಾದಿಯಿಂದ ಮಾಹಿತಿಯನ್ನು ಕೂಡಾ ಪಡೆದುಕೊಂಡು ನಾನು ವಿಲ್ ನಾಮೆ ಮಾಡಿರುತ್ತೇನೆ. ನಾನು ವಿಲ್ ನಾಮೆಯನ್ನು ಮಾಡುವ ಸಮಯದಲ್ಲಿ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ವಿಲ್ ನಾಮೆಯಲ್ಲಿ ತಿಳಿಸಿರುವ ಆಸ್ತಿಗಳು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದು ನನಗೆ ಗೊತ್ತಾಗಿರುತ್ತದೆ.

2. ನಿಡಿ 10 ವಿಲ್ ನಾಮೆಯ ಶೆಡ್ಯೂಲ್ ಸಿ ಯಲ್ಲಿ ತೋರಿಸಿರುವ ಐಟಂ ನಂಬರ್ 3 ಆಸ್ತಿಯ ಆರ್ ಟಿ ಸಿ ಯನ್ನು ಸಾಕ್ಷಿಗೆ ತೋರಿಸಿದ್ದು ಅದನ್ನು ನೋಡಿ ಒಪ್ಪಿದ ಮೇರೆಗೆ ನಿಪಿ 10 ಎಂದು ಗುರುತಿಸಲಾಗಿದೆ. ವಿಲ್ ನಾಮೆಯ ಶೆಡ್ಯೂಲ್ ಎ ಯಲ್ಲಿ ತೋರಿಸಿರುವ ಐಟಂ ನಂಬರ್ 5 ರ ಆರ್ ಟಿ ಸಿ ಯನ್ನು ನಾನು ಪರಿಶೀಲಿಸಿರುತ್ತೇನೋ ಇಲ್ಲವೋ ಎಂದು ಹೇಳಲು ಈಗ ನೆನಪಾಗುತ್ತಿಲ್ಲ. ನಿಪಿ 10 ರಲ್ಲಿ 1 ಮತ್ತು 3ನೇ ಪ್ರತಿವಾದಿಯವರನ್ನು ಹೊರತು ಪಡಿಸಿ ಬೇರೆಯವರ ಹೆಸರು ಕೂಡಾ ಇದೆ ಎಂದರೆ ಸರಿ . ನಿಪಿ 10ರಲ್ಲಿ ತಿಳಿಸಿರುವಂತಹ ಪಳಂಗಪ್ಪ ಎಂದರೆ 1 ಮತ್ತು 2ನೇ ವಾದಿಯವರ ತಂದೆ ಆಗಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ನಾನು ವಿಲ್ ನಾಮೆಯನ್ನು ತಯಾರಿಸುವಾಗ ನಿಪಿ 10 ರಲ್ಲಿ ತಿಳಿಸಿರುವ ಆಸ್ತಿ 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂಬುದರ ಬಗ್ಗೆ ಯಾವ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ ಎಂದು ಈಗ ಹೇಳಲು ನೆನಪಿಲ್ಲ.

3. ನಿಪಿ 4ರಲ್ಲೂ ಕೂಡಾ 1ನೇ ಪ್ರತಿವಾದಿಯವರ ಹೆಸರು ಮತ್ತು 1 ಮತ್ತು 2ನೇ ವಾದಿಯವರ ತಂದೆಯಾದ ಪಳಂಗಪ್ಪರವರ ಹೆಸರು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಪಳಂಗಪ್ಪರವರು ವಾದಿ 1 ಮತ್ತು 2 ರವರ ತಂದೆಯೋ ಅಥವಾ ಇಲ್ಲವೋ ಎಂದ ಹೇಳಲು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯವರನ್ನು ನಾನು ಭೀಮಯ್ಯ ಮತ್ತು ಪಳಂಗಪ್ಪ ಯಾರು ಎಂಬುದರ ಬಗ್ಗೆ ವಿಚಾರಿಸಿರುವ ಬಗ್ಗೆ ಹೇಳಲು ನೆನಪಿಲ್ಲ. ಸಾಕ್ಷಿ ಮುಂದುವರೆದು ಭೀಮಯ್ಯ ತನ್ನ ಮಗ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ನಾನು ಈ ದಾವೆಗೆ ಸಂಬಂಧಿಸಿದ ವಾದ ಪತ್ರವನ್ನು ಓದಿದ ಸಮಯದಲ್ಲಿ ಪಳಂಗಪ್ಪರವರು ವಾದಿಗಳ ತಂದೆ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ .

4. ದಾವಾ ಶೆಡ್ಯೂಲ್ ಐಟಂ 2 ಆಸ್ತಿ 1ನೇ ಪ್ರತಿವಾದಿಯವರ ಸ್ವಯಾರ್ಜಿತ ಆಸ್ತಿ ಎಂದು ಹೇಳಲು ಯಾವ ದಾಖಲೆಯನ್ನು ಪರಿಶೀಲಿಸಿದ್ದೆನು ಎಂದು ನನಗೆ ನೆನಪಿಲ್ಲ. ನಿಪಿ 7 ಆರ್ ಟಿ ಸಿ ದಾವಾ ಶೆಡ್ಯೂಲ್ ಐಟಂ 3 ಆಸ್ತಿಗೆ ಸಂಬಂಧಿಸಿದ ಅರ್ ಟಿ ಸಿ ಆಗಿದ್ದು ಸದರಿ ಆರ್ ಟಿ ಸಿ ಯಲ್ಲಿ 1, 3 ಮತ್ತು 9ನೇ ಪ್ರತಿವಾದಿಗಳು ಹಾಗೂ

ಬೋಜಪ್ಪ ಎಂಬುವವರ ಹೆಸರು ಇದೆ. ಬೋಜಪ್ಪ ಮತ್ತು ಪೊನ್ನಪ್ಪ ಎಂಬುವವರು ಯಾರು ಎಂದು ನಾನು 1ನೇ ಪ್ರತಿವಾದಿಯವರನ್ನು ವಿಚಾರಿಸಿರುತ್ತೇನೋ ಇಲ್ಲವೋ ಎಂದು ಹೇಳಲು ನೆನಪಾಗುತ್ತಿಲ್ಲ. ದಾವಾ ಶೆಡ್ಯೂಲ್ ಐಟಂ 3 ಆಸ್ತಿ 1ನೇ ಪ್ರತಿವಾದಿಯವರ ಸ್ವಯಾರ್ಜಿತ ಆಸ್ತಿ ಎಂದು ಹೇಳಲು ಯಾವ ದಾಖಲೆಯನ್ನು ಪರಿಶೀಲಿಸಿದ್ದೆನು ಎಂದು ನನಗೆ ನೆನಪಿಲ್ಲ.

5. ನಿಪಿ 8 ದಾವಾ ಶೆಡ್ಯೂಲ್ ಐಟಂ ನಂಬರ್ 6 ಸಂದಧಿಸಿದ ಆರ್ ಟಿ ಸಿ ಆಗಿರುತ್ತದೆ. ಸದರಿ ಆರ್ ಟಿ ಸಿ ಯಲ್ಲಿ 1ನೇ ಪ್ರತಿವಾದಿ ಹಾಗೂ ಬೋಜಪ್ಪ, ಪೊನ್ನಪ್ಪ ಎಂಬುವವರ ಹೆಸರು ಇದೆ. ಬೋಜಪ್ಪ ಮತ್ತು ಪೊನ್ನಪ್ಪ ಎಂಬುವವರು ಯಾರು ಎಂದು ನಾನು 1ನೇ ಪ್ರತಿವಾದಿಯವರನ್ನು ವಿಚಾರಿಸಿರುತ್ತೇನೋ ಇಲ್ಲವೋ ಎಂದು ಹೇಳಲು ನೆನಪಾಗುತ್ತಿಲ್ಲ. ದಾವಾ ಶೆಡ್ಯೂಲ್ ಐಟಂ 6 ಆಸ್ತಿ 1ನೇ ಪ್ರತಿವಾದಿಯವರ ಸ್ವಯಾರ್ಜಿತ ಆಸ್ತಿ ಎಂಬುದರ ಬಗ್ಗೆ ಯಾವ ದಾಖಲೆಯನ್ನು ಪರಿಶೀಲಿಸಿದ್ದೆನು ಎಂದು ಹೇಳಲು ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು 1ನೇ ಪ್ರತಿವಾದಿಯವರು ಸ್ವತ್ತುಗಳು ಮಂಜೂರಾದ ಬಗ್ಗೆ ಮತ್ತು ಖರೀದಿಸಿದ ಬಗ್ಗೆ ಒಟ್ಟು ದಾಖಲೆಗಳನ್ನು ಕೊಟ್ಟಿದ್ದರು. ಯಾವ ಸರ್ವೆ ನಂಬರ್ ಆಸ್ತಿ ಮಂಜೂರಾದ ಆಸ್ತಿ ಎಂದು ಹೇಳಲು ಮತ್ತು ಖರೀದಿಸಿದ ಆಸ್ತಿ ಎಂದು ಹೇಳಲು ಈಗ ನೆನಪಿಲ್ಲ. ನಾನು ವಿಲ್ ನಾಮೆ ಮಾಡುವಾಗ ಮ್ಯುಟೇಶನ್ ರಿಜಿಸ್ಟ್ರರ್ ನ್ನು ಪರಿಶೀಲಿಸಿರುತ್ತೇನೋ ಇಲ್ಲವೋ ಎಂದು ಹೇಳೇಲು ನೆನಪಿಲ್ಲ . ಆದರೆ ಮೂಲ ದಾಖಲೆಗಳನ್ನು ನಾನು ನೋಡಿರುತ್ತೇನೆ. ನಾನು 1ನೇ ಪ್ರತಿವಾದಿಯವರನ್ನು ಆರ್ ಟಿ ಸಿಗಳಲ್ಲಿ ಬೇರೆಯವರ ಹೆಸರುಗಳನ್ನು ಸೇರಿಸಿರುವ ಬಗ್ಗೆ ವೈಯಕ್ತಿಕವಾಗಿ ಕೇಳಿರಬಹುದು.

6. ಈ ದಾವೆಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ 3ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಬರುತ್ತಿದ್ದರು ಎಂದರೆ ಸಾಕ್ಷಿ 1ನೇ ಪ್ರತಿವಾದಿ ಕೂಡಾ ಬರುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಕಛೇರಿಗೆ ಕೆಲವೊಮ್ಮೆ 1ನೇ ಪ್ರತಿವಾದಿಯವರು ಮಾತ್ರ ಬರುತ್ತಿದ್ದರು ಹಾಗೂ ಕೆಲವೊಮ್ಮೆ 1ನೇ ಪ್ರತಿವಾದಿ , 3ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಒಟ್ಟಿಗೆ ಬರುತ್ತಿದ್ದರು. 1ನೇ ಪ್ರತಿವಾದಿಯವರಿಗೆ ಕಿವಿ ಸರಿಯಾಗಿ

ಕೇಳಿಸುತ್ತಿರಲಿಲ್ಲ ಮತ್ತು ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ ಎಂದರೆ ಸುಳ್ಳು. 1ನೇ ಪ್ರತಿವಾದಿ ಊರುಗೋಲಿನ ಸಹಾಯದಿಂದ ನಡೆಯುತ್ತಿದ್ದರು ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಕೋಲನ್ನು ಹಿಡಿದುಕೊಂಡು ಬರುತ್ತಿದ್ದರು ಎಂದು ನುಡಿಯುತ್ತಾರೆ.

7. 1ನೇ ಪ್ರತಿವಾದಿ ಮೇ 2017ರಲ್ಲಿ ವಿಲ್ ನಾಮೆಯನ್ನು ಬರೆಯುವ ಬಗ್ಗೆ ತಿಳಿಸಿದ್ದರು. ಯಾವ ದಿನದಂದು ತಿಳಿಸಿದ್ದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಸದರಿ ದಿನದಂದು 1ನೇ ಪ್ರತಿವಾದಿ ಮಾತ್ರ ಬಂದಿದ್ದರು. ನಿಡಿ 10 ವಿಲ್ ನಾಮೆಯನ್ನು ನಾನೇ ಬೆರಳಚ್ಚು ಮಾಡಿರುತ್ತೇನೆ. ನಾನು ವಿಲ್ ನಾಮೆಯನ್ನು ನೋಂದಣಿ ಮಾಡಿಸುವ ಎರಡು ವಾರಗಳ ಮುಂಚಿತವಾಗಿ ನನಗೆ ವಿಲ್ ನಾಮೆಯನ್ನು ನೊಂದಾವಣಿ ಮಾಡಿಸಬೇಕು ಎಂದು 1ನೇ ಪ್ರತಿವಾದಿ ತಿಳಿಸಿದ್ದರು. 1ನೇ ಪ್ರತಿವಾದಿ ನನಗೆ ವಿಲ್ ನಾಮೆಯನ್ನು ಮಾಡಲು ಮಾಹಿತಿ ನೀಡಿದ ದಿನದಂದು ನಾನು ವಿಲ್ ನಾಮೆಯನ್ನು ತಯಾರಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಸಾಮಾನ್ಯವಾಗಿ ನಾನು ಮಾಹಿತಿಯನ್ನು ಪಡೆದುಕೊಂಡು ಒಂದು ವಾರದ ನಂತರದಲ್ಲಿ ಬರಲು ತಿಳಿಸುತ್ತೇನೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯವರು ಒಂದು ವಾರ ಬಿಟ್ಟು ನನ್ನ ಬಳಿ ಬಂದಾಗ ನಾನು ವಿಲ್ ನಾಮೆಯ ಅಂತಿಮ ಪ್ರತಿಯನ್ನು ತಯಾರಿಸಿದ್ದೆನು. 1ನೇ ಪ್ರತಿವಾದಿಯವರು ಎರಡನೇ ಬಾರಿ ನನ್ನನ್ನು ಭೇಟಿ ಮಾಡಿದಾಗ ಇಂತಿಂಹವರನ್ನು ನಾನು ಸಾಕ್ಷಿದಾರರನ್ನಾಗಿ ಕರೆದುಕೊಂಡು ಬರುತ್ತೇನೆ ಎಂದು ನನಗೆ ತಿಳಿಸಿದ್ದರು. ಸದರಿ ಸಾಕ್ಷಿದಾರರನ್ನು ನಾನು ನೊಂದಾವಣಿ ಕಛೇರಿಯಲ್ಲಿ ನೋಡಿರುತ್ತೇನೆ. 1ನೇ ಪ್ರತಿವಾದಿಯವರು ಸಾಕ್ಷಿದಾರರಿಗೆ ಸಂಬಂಧಿಸಿದಂತೆ ಪೂರ್ತಿ ವಿಳಾಸವನ್ನು ಎರಡನೇ ಬಾರಿ ನನ್ನ ಬಳಿ ಬಂದಾಗ ಹೇಳಿರಬಹುದು.

8. 1ನೇ ಪ್ರತಿವಾದಿಯವರು ಎರಡನೇ ಬಾರಿ ನನ್ನ ಬಳಿ ಬಂದಾಗ ವಿಲ್ ನಾಮೆಯನ್ನು ನೊಂದಾವಣಿ ಮಾಡಿಸಿಕೊಡಿ ಎಂದು ನನಗೆ ತಿಳಿಸಿದ್ದರು. ನಿಡಿ 10 ವಿಲ್ ನಾಮೆಯ ಪ್ರಕಾರ ಆಸ್ತಿಗಳನ್ನು 2 ಮತ್ತು 3ನೇ ಪ್ರತಿವಾದಿಯವರಿಗೆ ಪಾಲು ಮಾಡಿರುವ ಹಾಗೆ ಇದೆ ಎಂದರೆ ಸಾಕ್ಷಿ ಎ ಶೆಡ್ಯೂಲ್ ಮತ್ತು ಬಿ ಶೆಡ್ಯೂಲ್ ಎಂದು ತೋರಿಸಲಾಗಿದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯವರು ತನ್ನ ಮತ್ತೊಬ್ಬ

ಮಗನಾದ ಮೃತ ಪಳಂಗಪ್ಪರವರ ಮಕ್ಕಳಾದ ವಾದಿಯವರಿಗೆ ವಿಲ್ ನಾಮೆಯಲ್ಲಿ ಆಸ್ತಿಯನ್ನು ಪಾಲು ಮಾಡದೇ ಇರುವುದರ ಬಗ್ಗೆ ನಾನು ಕೇಳಿರುವುದಿಲ್ಲ. ಸಾಕ್ಷಿ ಮುಂದುವರೆದು ಅದು ಅವರ ವೈಯಕ್ತಿಕ ವಿಷಯ ಆಗಿರುತ್ತದೆ ಎಂದು ನುಡಿಯುತ್ತಾರೆ.

9. ನಿಡಿ 10 ವಿಲ್ ನಾಮೆಯನ್ನು ನೊಂದಣಿ ಮಾಡಿಸುವ ದಿನದಂದು ಬೆಳಿಗ್ಗೆ 1 ನೇ ಪ್ರತಿವಾದಿ ನನ್ನ ಕಛೇರಿಗೆ ಬಂದಿದ್ದರು. ಆ ಸಮಯದಲ್ಲಿ ಅವರು ಒಬ್ಬರೇ ಬಂದಿದ್ದರು. ಸುಮಾರು ಬೆಳಿಗ್ಗೆ 9.30 ಗಂಟೆಗೆ ನನ್ನ ಕಛೇರಿಗೆ 1 ನೇ ಪ್ರತಿವಾದಿ ಬಂದಿರಬಹುದು. 1 ನೇ ಪರತಿವಾದಿಯವರು ನನ್ನ ಕಛೇರಿಗೆ ಬಂದಾಗ ಇಂತಹವರನ್ನೇ ನಾನು ಸಾಕ್ಷಿದಾರರಾಗಿ ನೊಂದಾವಣಿ ಕಛೇರಿಗೆ ಕರೆದುಕೊಂಡು ಬರುತ್ತೇನೆ ಎಂದು ತಿಳಿಸಿದ್ದರು. ಬೆಳಿಗ್ಗೆ 9.45 ಗಂಟೆ ವೇಳೆಯಲ್ಲಿ 1 ನೇ ಪ್ರತಿವಾದಿ ನೊಂದಾವಣಿ ಕಛೇರಿಗೆ ಹೋಗಲು ನನ್ನ ಕಛೇರಿಯಿಂದ ಬಿಟ್ಟಿರುತ್ತಾರೆ. ನಾನು ಸುಮಾರು 10.00 ಗಂಟೆಗೆ ನನ್ನ ಕಛೇರಿಯನ್ನು ಬಿಟ್ಟು ನೇರವಾಗಿ ನೊಂದಾವಣಿ ಕಛೇರಿಗೆ ಹೋಗಿರುತ್ತೇನೆ. ನೊಂದಾವಣಿ ಕಛೇರಿಯಲ್ಲಿ 3 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಇರಲಿಲ್ಲ. ಸಾಕ್ಷಿದಾರರು 1 ನೇ ಪ್ರತಿವಾದಿಗೆ ಯಾವ ರೀತಿ ಸಂಬಂಧ ಎಂದು ಕೇಳಿರುವುದಿಲ್ಲ. 2017 ರಲ್ಲಿ ನೊಂದಾವಣಿ ಕಛೇರಿ ಕೊಹಿನೂರು ರಸ್ತೆಯ ಪಕ್ಕದಲ್ಲಿ ಇತ್ತು.

10. ನಿಡಿ 10 ವಿಲ್ ನಾಮೆಗೆ ನಾನು 1 ನೇ ಪ್ರತಿವಾದಿ ಮತ್ತು ಸಾಕ್ಷಿದಾರರ ಸಹಿಗಳನ್ನು ನೊಂದಾವಣಿ ಕಛೇರಿಯ ಒಳಗೆ ಸಾರ್ವಜನಿಕರಿಗೆ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿರುವ ಜಾಗದಲ್ಲಿ ಪಡೆದುಕೊಂಡಿರುತ್ತೇನೆ. ನಾನು ವಿಲ್ ನಾಮೆಯನ್ನು 10.30 ಗಂಟೆ ಒಳಗೆ 1 ನೇ ಪ್ರತಿವಾದಿಯವರು ನೊಂದಾವಣಿ ಅಧಿಕಾರಿಯವರಿಗೆ ಕೊಟ್ಟಿರುತ್ತಾರೆ. ನೊಂದಾವಣಿ ಪ್ರಕ್ರಿಯೆ ಮುಗಿದು ವಿಲ್ ನಾಮೆಯ ಸ್ಕ್ಯಾನ್ ಪ್ರತಿ ನಮಗೆ ಸಿಗುವವರೆಗೆ 10.45 ಗಂಟೆಯಾಗಿದೆ.

11. ನಿಡಿ 10 ವಿಲ್ ನಾಮೆಯನ್ನು ನಾನು ತಯಾರಿಸುವಾಗ ನ್ಯಾಯಾಲಯದಲ್ಲಿ ಇಟ್ಟಿರುವ ಠೇವಣಿಯ ಬಗ್ಗೆ 1 ನೇ ಪ್ರತಿವಾದಿ ನನಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ನಿಡಿ 10 ವಿಲ್ ನಾಮೆಯನ್ನು 1 ನೇ ಪ್ರತಿವಾದಿಯವರು ಮಾಡುವಷ್ಟು ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯ ಚೆನ್ನಾಗಿರಲಿಲ್ಲ ಎಂದರೆ ಸುಳ್ಳು. ಅದೇ

ರೀತಿ 1 ನೇ ಪ್ರತಿವಾದಿಯವರಿಗೆ ವಿಲ್ ನಾಮೆ ಮಾಡುವ ಯಾವುದೇ ಉದ್ದೇಶ ಇರಲಿಲ್ಲ ಎಂದರೆ ಸುಳ್ಳು. ನಿಡಿ 10 ರಲ್ಲಿ ಕಾಣಿಸಿರುವಂತಹ ಆಸ್ತಿಗಳು 1 ನೇ ಪ್ರತಿವಾದಿಯವರ ಸ್ವಯಾರ್ಜಿತ ಅಸ್ತಿ ಆಗಿರುವುದಿಲ್ಲ ಎಂದರೆ ಸುಳ್ಳು. 3 ನೇ ಪ್ರತಿವಾದಿ ಮತ್ತು ಅವರ ಹೆಂಡತಿಯವರಿಗೆ ಸಹಾಯ ಮಾಡುವ ಸಲುವಾಗಿ ನಾನು ಅವರ ರಕ್ತ ಸಂಬಂಧಿಕರನ್ನೇ ಸಾಕ್ಷಿದಾರರನ್ನಾಗಿ ಮಾಡಿ ನಿಡಿ 10 ವಿಲ್ ನಾಮೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸುಳ್ಳು. ನಿಡಿ 10 ವಿಲ್ ನಾಮೆಯ ಬಗ್ಗೆ 1 ನೇ ಪ್ರತಿವಾದಿಗೆ ಯಾವುದೇ ವಿಷಯ ಗೊತ್ತಿರುವುದಿಲ್ಲ ಎಂದರೆ ಸುಳ್ಳು. 3 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಆಸ್ತಿಯನ್ನು ಹೊಡೆದುಕೊಳ್ಳುವ ಸಲುವಾಗಿ 1 ನೇ ಪ್ರತಿವಾದಿಯವರಿಗೆ ಗೊತ್ತಿಲ್ಲ ಹಾಗೆ ನಿಡಿ 10 ವಿಲ್ ನಾಮೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸುಳ್ಳು.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.

ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೊಡಗು ಮಡಿಕೇರಿ.

ಓ ಎಸ್ ನಂಬರ್ಃ

ಪಿಡಬ್ಲ್ಯು:7

| | | |
|---|---|---|
| ಸಾಕ್ಷಿದಾರರ ಹೆಸರು | ಃ | |
| ತಂದೆ ಹೆಸರು | ಃ | |
| ಪ್ರಾಯ | ಃ | ವರ್ಷ |
| ಉದ್ಯೋಗ | ಃ | |
| ವಾಸಸ್ಥಳ | ಃ | |

**ದಿಃ13.07.2022 ರಂದು** ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಓಎಸ್ ನಂಬರ್: 117/2015 ಡಿ ಡಬ್ಲ್ಯು: 3

**ಮುಖ್ಯ ವಿಚಾರಣೆ: ಶ್ರೀ ವಕೀಲರಿಂದ:**

**ಪಾಟೀ ಸವಾಲು: ಶ್ರೀ ವಕೀಲರಿಂದ:**

ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ನೀಡಲಾಯಿತು.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.

**ಎದುರುದಾರರು ಏಕಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.**

ಲಿಖಿತ ತಕರಾರು / ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.